# ಕಾರ್ಯಪಾಲಕ ಅಭಿಯಂತರರು (ಯೋಜನೆ)

**ಬೃ.ಬೆಂ.ಮ.ಪಾ, ಮಹದೇವಪುರ ವಲಯ.ಕೆ.ಆರ್.ಪುರ,ಬೆಂಗಳೂರು-36**

**ಸಂಖ್ಯೆ :ಬಿಬಿಎಂಪಿ/ಕಾ.ಅ(ಯೋ)/ಮ.ವ/ಇ-ಹರಾಜು ಟೆಂಡರ್/02/2024-25, ದಿನಾಂಕ: 04-09-2024**

## KPPP (Portal) (ಇ-ಪ್ರಕ್ಯೂರ್‌ಮೆಂಟ್ ಕೆಪಿಪಿ ಪೋರ್ಟಲ್ ಮುಖಾಂತರ) ಇ-ಹರಾಜು ಇಸ್ತಿಹಾರ್ ಅಲ್ಪಾವಧಿ ಟೆಂಡರ್ ಪ್ರಕಟಣೆ

**ವಿಷಯ:** ಕೆ.ಆರ್.ಪುರಂ ಸಂತೆ ಮೈದಾನದಲ್ಲಿ ನಡೆಯುವ ವಾರದ ಸಂತೆ ಸುಂಕ ಮತ್ತು ದಿನ ವಹಿ ಸಂತೆ ಸುಂಕವನ್ನು ಒಂದು ವರ್ಷದ ಅವಧಿಗೆ ಸುಂಕ ವಸೂಲಾತಿ ಮಾಡುವ ಬಗ್ಗೆ ಇ-ಹರಾಜು ಇಸ್ತಿಹಾರ್ ಪ್ರಕಟಣೆ(2ನೇ ಕರೆ).

*****

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಳಕಂಡ ಬಾಬ್ತುಗಳನ್ನು 2024-25ನೇ ಸಾಲಿನ ಆಯಾ ಬಾಬ್ತುಗಳ ಮುಂದೆ ನಮೂದಿಸಿರುವ ದಿನಾಂಕದಂದು ವಿಶೇಷ ಆಯುಕ್ತರು ಬಿಬಿಎಂಪಿ(ಮಾರುಕಟ್ಟೆ) ರವರ ಮೂಲ ಕಡತದಲ್ಲಿ ನೀಡಿರುವ ನಿರ್ದೇಶನದಂತೆ ಟೆಂಡರ್ ಪ್ರಕ್ರಿಯೆ ನಡೆಸುತ್ತಿದ್ದು, ಇಚ್ಚೆ ಉಳ್ಳವರು KPPP(portal)(ಇ-ಪ್ರಕ್ಯೂರ್‌ಮೆಂಟ್) ಹರಾಜಿನಲ್ಲಿ ಭಾಗವಹಿಸಿ KPPP(portal) ನಲ್ಲಿ ಇ-ಹರಾಜು ಷರತ್ತಿಗೊಳಪಟ್ಟು ಬಾಬ್ತುಗಳನ್ನು ರೂಢಿಸಿಕೊಳ್ಳಬಹುದಾಗಿರುತ್ತದೆ. KPPP(portal)ಹರಾಜು ಷರತ್ತುಗಳನ್ನು ಇನ್ನಿತರೆ ವಿವರಗಳನ್ನು ಕಛೇರಿ ವೇಳೆಯಲ್ಲಿ ಕೆ.ಆರ್.ಪುರ ಕಂದಾಯ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ನೊಂದಾಯಿಸುವ ದಿನಾಂಕ: 05-09-2024 ಮತ್ತು ಕೊನೆಯ ದಿನಾಂಕ: 17-09-2024
ಇ-ಹರಾಜು ಅನ್‌ಲೈನ್ ಬಿಡ್ಡಿಂಗ್ ಅರಂಭಿಸುವ ದಿನಾಂಕ: 18-09-2024
ಸಮಯ: ಬೆಳಿಗ್ಗೆ 10.00ಗಂಟೆ
ಇ-ಹರಾಜನ್ನು ಮುಕ್ತಾಯಗೊಳಿಸುವ ಕೊನೆಯ ದಿನಾಂಕ: 18-09-2024
ಸಮಯ: ಸಂಜೆ 5.00ಗಂಟೆ
**ಆರಂಭಿಕ ಬಿಡ್ ದರ ಪ್ರತಿ ಮಾಹೆಗೆ ರೂ.5.95 ಲಕ್ಷಗಳು.**
**(ಒಟ್ಟು (1ಎಕರೆ 14 ಗುಂಟೆ) 58,806 ಚ.ಅ ಗಳಿದ್ದು, ರೂ.11 ರಂತೆ ಪ್ರತಿ ಚ.ಅಡಿಗೆ ನಿಗದಿಪಡಿಸಲಾಗಿದೆ.)**

- ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ ದರಗಳನ್ನು ಚದರ ಅಡಿಗೆ ರೂ.11.00 ರಂತೆ ಪ್ರತಿ ತಿಂಗಳು/ಮಾಹೆಗೆ ಸುಂಕ ನಿಗದಿಪಡಿಸಲಾಗಿದೆ.

**ಷರತ್ತುಗಳು:-**

**<u>ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ ಹಾಗೂ ನಿಬಂಧನೆಗಳು:</u>**

1) ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2) ವಿಳಾಸದ ಸಾಬೀತಿಗಾಗಿ ಗೆಜೆಟೆಡ್ ಅಧಿಕಾರಿ/ನೋಟರಿಯಿಂದ/ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡ ಕೆಳಕಂಡ ದಾಖಲೆಗಳಲ್ಲಿ ಒಂದನ್ನು ಸಲ್ಲಿಸಬೇಕು.

ಎ) ಮತದಾರರ ಗುರುತಿನ ಚೀಟಿ ಬಿ) ವಾಹನ ಚಾಲನೆಯ ಪರವಾನಗಿ ಸಿ) ಪಾಸ್‌ಪೋರ್ಟ್

4) ಭಾವಚಿತ್ರದ ಗುರುತು (ಗೆಜೆಟೆಡ್ ಅಧಿಕಾರಿ/ನೋಟರಿಯಿಂದ)/ಭಾರತೀಯ ಅನಿವಾಸಿಯಾಗಿದ್ದಲ್ಲಿ ಎಂಬೆಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು)
5) ಬಾಕಿದಾರರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

Scanned with OKEN Scanner

6) ಹರಾಜಿನಲ್ಲಿ ಭಾಗವಹಿಸುವವರು ವಾರದ ಸಂತೆ ಸುಂಕ ಮತ್ತು ಪ್ರತಿದಿನ ಮಾರುಕಟ್ಟೆ ಸುಂಕದ ಠೇವಣಿ ಹಣವಾದ (ಇ.ಎಂ.ಡಿ) ರೂ.1.30 ಲಕ್ಷವನ್ನು KPPP(portal)ನಲ್ಲಿ ಸಲ್ಲಿಸತಕ್ಕದ್ದು.

7) ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ/ಪುಟ್‌ಫಾತ್ ಸ್ಥಳಾಂತರಗೊಂಡಲ್ಲಿ ಪಾಲಿಕೆಯು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರತಕ್ಕದ್ದು.

8) ಸುಂಕವನ್ನು ಕೊಡತಕ್ಕವರೆಗೆ ಸುಂಕ ಪಾವತಿ ಮಾಡಲ್ಪಟ್ಟ ದಿನಾಂಕ ಮತ್ತು ಮೊಬಲಗು ನಮೂದಿಸಬೇಕು ಇಂತಹ ರಶೀದಿ ಪುಸ್ತಕಗಳನ್ನು ತಮ್ಮ ಸ್ವಂತ ಖರ್ಚಿನಿಂದ ಮಾಡಿಸತಕ್ಕದ್ದು. ಲೆಕ್ಕ ಚೆಕ್ ಮಾಡಿಸಲು ಅನುಕೂಲಿಸುವಂತೆ ಕೌಂಟರ್ ಫೈಲ್ ರಶೀದಿಗಳನ್ನು ಪಾಲಿಕೆಯ ಅಧಿಕಾರಿ ಸಿಬ್ಬಂದಿಗಳು ಕೇಳಿದಾಗ ಹಾಜರುಪಡಿಸಬೇಕು.

9) ಯಾವ ಕಾರಣದಿಂದಾಗಲಿ ಖಿಸ್ತಿಗೆ ಕಮಿಷನ್ ಆಗಲೀ ಅಥವಾ ಇತರೇ ಪರಿಹಾರವನ್ನಾಗಲೀ ನೀಡಲಾಗುವುದಿಲ್ಲ.

10) ಅಖೈರು ಬಿಡ್‌ದಾರರು ಪಾಲಿಕೆಯ ನಿಯಮಗಳು ಮಂಜೂರಾದ ಬೈಲಾಗಳಿಗೆ ಬದ್ಧವಾಗಿರಬೇಕು ಮತ್ತು ಪಾಲಿಕೆಯ ಅಧಿಕಾರಿಗಳು ಮಾಡಿದ ತೀರ್ಮಾನದಂತೆ ನಡೆದುಕೊಳ್ಳಬೇಕು.

11) ಮಂಜೂರಾಗುವ ಸುಂಕದ ದರವನ್ನು 'ಸುವ ತಪಸೀಲು ಲಿಷ್ಟನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಸ್ಪಷ್ಟವಾಗಿ ತನ್ನ ಸ್ವಂತ ಖರ್ಚಿನಿಂದ ಬರೆದು ಬಹಿರಂಗವಾಗಿ ಸಂತೆ ಬಳಿ ಇಡತಕ್ಕದ್ದು.

12) ರೆಗ್ಯೂಲೇಟೆಡ್ ಮಾರ್ಕೆಟ್ ಪರಿಮಿತಿಗೊಳಪಟ್ಟ ಮಾರ್ಕೆಟ್ ಆವರಣದಲ್ಲಿ ಮಾರಾಟವಾಗುತ್ತಿರುವ ಸರಕುಗಳ ಮೇಲೆ ನೆಲ ಬಾಡಿಗೆಯನ್ನು ವಸೂಲು ಮಾಡುವ ಹಕ್ಕು ಅಖೈರ್ ಬಿಡ್‌ದಾರರಿಗೆ ಇರುವುದಿಲ್ಲ, ಆದರೆ ಸರಕು ಅಥವಾ ಸಾಮಾನುಗಳೇನಾದರೂ ಸಂತೆ ಆವರಣದಲ್ಲಿ ಮಾರಲ್ಪಟ್ಟರೆ ಮಾತ್ರ ಅಖೈರ್ ಬಿಡ್‌ದಾರರಿಗೆ ಸುಂಕ ವಸೂಲಿ ಮಾಡಲು ಹಕ್ಕಿರುತ್ತದೆ.

13) ಮೇಲ್ಕಂಡ ಯಾವುದೇ ಷರತ್ತುಗಳನ್ನು ಮಾರ್ಪಾಡು ಮಾಡುವ ಅಥವಾ ರದ್ದು ಮಾಡುವ ಅಧಿಕಾರವನ್ನು ಪಾಲಿಕೆಯು ಹೊಂದಿರುತ್ತದೆ.

14) ದಿನನಿತ್ಯ ಮಾರುಕಟ್ಟೆ ವಸೂಲಾತಿಯನ್ನು ರಸ್ತೆ ಬದಿ ಅಂಗಡಿ ಇಡುವುದರಿಂದ ವಸೂಲಿ ಮಾಡತಕ್ಕದ್ದು.

15) ಮುಷ್ಕರ, ಕರ್ನಾಟಕ ಬಂದ್, ಭಾರತ ಬಂದ್, ಅಥವ ಇತರೆ ದಿಢೀರ್ ಬೆಳವಣಿಗೆಗಳಿಗೆ ಪಾಲಿಕೆಯು ಜವಾಬ್ದಾರಿಯಲ್ಲ ಮತ್ತು ಆ ದಿನದಂದಿನ ವಸೂಲಾತಿಯನ್ನು ಮುಂದಿನ ದಿನಗಳಿಗೆ ಮುಂದುವರೆಸುವುದಿಲ್ಲ.

16) ಅಖೈರು ಬಿಡ್‌ದಾರರು KPPP(portal) ನಲ್ಲಿ ಇ-ಹರಾಜು ಅಖೈರ್‌ರಾದ ಕೂಡಲೇ ಪೂರ್ಣ ವಿಳಾಸ ಮತ್ತು ಭಾವಚಿತ್ರವನ್ನು ಪಾಲಿಕೆಗೆ ನೀಡತಕ್ಕದ್ದು.

17) ಬಿಡ್‌ದಾರರು ಚಾಲ್ತಿಯಲ್ಲಿರುವ/ಚಾಲ್ತಿಯ ಸಾಲಿನಲ್ಲಿ ಬರಬಹುದಾದ ಕಾನೂನು ನಿಯಾಮಾವಳಿಗೆ ಬದ್ದರಾಗಿರತಕ್ಕದ್ದು. ತಪ್ಪಿದ್ದಲ್ಲಿ ಹರಾಜಿನಲ್ಲಿ ಪಡೆದಿರುವ ಹಕ್ಕನ್ನು ಬಿಬಿಎಂಪಿ ಪಾಲಿಕೆಯ ವಶಕ್ಕೆ ಪಡೆಯಲಾಗುವುದು.

18) ಬಾಬ್ತುಗಳ ಸುಂಕದ ದರವನ್ನು ಪರಿಷ್ಕರಿಸುವ ಅಧಿಕಾರವನ್ನು ಪಾಲಿಕೆಯು ಕಾಯ್ದಿರಿಸಿಕೊಂಡಿರುತ್ತದೆ.

19) ಅಖೈರು ಬಿಡ್‌ದಾರರು ಷೆಡ್ಯೂಲ್‌ನಲ್ಲಿ ಇರುವ ದರಗಳು ಒಂದು ವೇಳೆ ಹರಾಜಿನ ಅವಧಿಯಲ್ಲಿ ಪಾಲಿಕೆಯು ದರಗಳನ್ನು ಪರಿಷ್ಕರಿಸಿದ್ದಲ್ಲಿ ಪರಿಷ್ಕರಿಸಿದ ದರಗಳಂತೆ ಮಾರ್ಪಡಿಸಿ ಷೆಡ್ಯೂಲ್ ದರಗಳನ್ವಯ ಬಿಡ್ ಮಾಡುವುದು.

20) ವಾರದ ಸಂತೆ ಅಥವಾ ದಿನವಹಿ ಮಾರುಕಟ್ಟೆ ದರಗಳನ್ನು ಚದರ ಅಡಿಗಳಲ್ಲಿ ಸುಂಕ ನಿಗದಿಪಡಿಸಲಾಗಿದ್ದು, ಒಟ್ಟು (1ಎಕರೆ 14 ಗುಂಟೆ) 58,806 ಚ.ಅ.ಗಳಿದ್ದು, ಪ್ರತಿ ಚದರ ಅಡಿಗೆ ರೂ.11.00 ರಂತೆ ತಿಂಗಳು/ಮಾಹೆಗೆ ಸುಂಕ ನಿಗದಿಪಡಿಸಲಾಗಿದೆ.

21) ಯಶಸ್ವಿ ಬಿಡ್‌ದಾರರ ಇಎಂಡಿಯನ್ನು ಭದ್ರತಾ ಠೇವಣಿಗೆ ಹೊಂದಿಸಿಕೊಳ್ಳಲಾಗುವುದು, ವ್ಯತ್ಯಾಸದ ಮೊತ್ತವನ್ನು ತಿಳುವಳಿಕೆ ಪತ್ರದ ದಿನಾಂಕದಿಂದ 07 ದಿನಗಳ ಒಳಗಾಗಿ ಪಾವತಿಸತಕ್ಕದ್ದು.

22) ಯಾವುದೇ ಬಿಡ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮುಖ್ಯ ಅಭಿಯಂತರರು(ಮ.ವ) ಕಾರ್ಯಪಾಲಕ ಅಭಿಯಂತರರು (ಯೋ) ಮ.ವಲಯ, ಬಿಬಿಎಂಪಿ ರವರು ಹೊಂದಿರುತ್ತಾರೆ, ಅವರ ನಿರ್ಧಾರವೇ ಅಂತಿಮವಾಗಿರುತ್ತದೆ.

23) ಇ-ಹಜಾರಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬಿಬಿಎಂಪಿ ಮಹದೇವಪುರ ವಲಯ ಕಾರ್ಯಪಾಲಕ ಅಭಿಯಂತರರು (ಯೋಜನೆ)ಕಛೇರಿಯಲ್ಲಿ, ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

Scanned with OKEN Scanner

24) ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್‌ಗಳಿಗೆ ಡೆಲ್ಟಾ ಟೈಮ್ 10 ನಿಮಿಷಗಳ ಕಾಲಾ ವಿಸ್ತರಣೆಯಾಗುತ್ತದೆ.

25) ಅನಿವಾರ್ಯ ಕಾರಣಗಳಿಂದ ಗುತ್ತಿಗೆ ಅವಧಿಯನ್ನು ವಿಸ್ತರಿಸಿದಲ್ಲಿ, ವಿಸ್ತರಿಸಿದ ಅವಧಿಗೆ ಶೇ. 10 ರಷ್ಟು ಹೆಚ್ಚಿನ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

26) ಟೆಂಡರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಬಿಡ್ಡುದಾರರಲ್ಲಿ H1 ಬರುವ ಬಿಡ್ಡುದಾರರಿಗೆ ಕಾರ್ಯದೇಶವನ್ನು ನೀಡಲಾಗುವುದು.

27) ಹರಾಜು ಪ್ರಕ್ರಿಯೆಯಲ್ಲಿ ಆಯ್ಕೆಯಾದ H1 ಬಿಡ್ಡುದಾರರು ನಮೂದಿಸಿದ ಮೊತ್ತದ 3 ತಿಂಗಳ ಮೊತ್ತವನ್ನು ಮುಂಗಡ ಭದ್ರತಾ ಠೇವಣಿ ಮೊತ್ತವಾಗಿ ಪಾಲಿಕೆಗೆ ಪಾವತಿಸಿ ಕರಾರು ಮಾಡಿಕೊಳ್ಳುವುದು.

28) ಯಾವುದೇ ವಿಚಾರಣೆಗಾಗಿ ಕಾರ್ಯಪಾಲಕ ಅಭಿಯಂತರರು(ಯೋಜನೆ) ಮಹದೇವಪುರ ವಿಭಾಗ ಮೊಬೈಲ್ ಸಂಖ್ಯೆ: **9448204596/ 9845409815** ರವರನ್ನು ಸಂಪರ್ಕಿಸಬಹುದಾಗಿರುತ್ತದೆ.

Sd/-

ಕಾರ್ಯಪಾಲಕ ಅಭಿಯಂತರರು(ಯೋಜನೆ)
ಮಹದೇವಪುರ ವಲಯ,

ಪ್ರತಿಯನ್ನು:

1. ಮಾನ್ಯ ವಲಯ ಆಯುಕ್ತರು ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಉಪ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಸಾರ್ವಜನಿಕ ಸಂಪರ್ಕಾಧಿಕಾರಿಗಳು,ಬಿಬಿಎಂಪಿ ರವರಿಗೆ ಸಲ್ಲಿಸುತ್ತಾ ಸದರಿ ಟೆಂಡರ್(ಇ-ಹರಾಜು ಪ್ರಕಟಣೆಯನ್ನು ಕನ್ನಡ ಮತ್ತು ಆಂಗ್ಲ ಬಾಷೆಯ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲು ಕೋರಿದೆ.
6. ಮಾಹಿತಿ ತಂತ್ರಜ್ಞಾನ ಸಲಹೆಗಾರರು,ಬಿಬಿಎಂಪಿ ರವರಿಗೆ ಸಲ್ಲಿಸುತ್ತಾ ಸದರಿ ಟೆಂಡರ್(ಇ-ಹರಾಜು ಪ್ರಕಟಣೆಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
7. ಕಂದಾಯ ಅಧಿಕಾರಿ, ಕೆ.ಆರ್.ಪುರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಂದಾಯ ಅಧಿಕಾರಿ, ಕೆ.ಆರ್.ಪುರ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9. ಉಪ ನಿಯಂತ್ರಕರು(ಹಣಕಾಸು) ಮಹದೇವಪುರ ವಲಯ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಪ್ರಕಟಣಾ ಫಲಕಕ್ಕೆ
11. ಕಛೇರಿ ಕಡತಕ್ಕೆ.

ಕಾರ್ಯಪಾಲಕ ಅಭಿಯಂತರರು(ಯೋಜನೆ)
ಮಹದೇವಪುರ ವಲಯ,

Scanned with OKEN Scanner